ಮಾಧ್ಯಮ ಮಾಹಿತಿ:

#ProjectShivajinagar ಘ.ತ್ಯಾ.ನಿ ಯೋಜನೆಗೆ ತರಬೇತಿ ನಡೆಸಿರುವ ಬಗ್ಗೆ:

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಶಿವಾಜಿನಗರ ವಾರ್ಡ್-92ರಲ್ಲಿ ಘನತ್ಯಾಜ್ಯ ವಿಲೇವಾರಿ ಮಾಡುವ ಸಂಬಂಧ #ProjectShivajinagar ಘನ ತ್ಯಾಜ್ಯ ನಿರ್ವಹಣೆ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದ್ದು, ಶಿವಾಜಿನಗರದ ತಾಜ್ ಹೋಟೆಲ್ ನಲ್ಲಿ ಸದರಿ ಯೋಜನೆಗೆ ಸಂಬಂಧಿಸಿದ ಪೌರಕಾರ್ಮಿಕರು, ಕಸದ ಗುತ್ತಿಗೆದಾರರು, ಆಟೋ ಟಿಪ್ಪರ್ ಚಾಲಕರು/ಸಹಾಯಕರು, ಸ್ವಯಂಸೇವಕರು ಹಾಗೂ ಇತರೆ ಸಂಬಂಧಪಟ್ಟ ಅಧಿಕಾರಿ/ಸಿಬ್ಬಂದಿಗಳಿಗೆ ತರಬೇತಿ ನೀಡಲಾಗಿದೆ. ಸದರಿ ತರಬೇತಿಯಲ್ಲಿ ಸ್ಥಳೀಯ ಶಾಸಕರು ಶ್ರೀ ರಿಜ್ವಾನ್ ಹರ್ಷದ್, ವಿಶೇಷ ಆಯುಕ್ತರು(ಘನತ್ಯಾ) ಶ್ರೀ ಡಿ.ರಂದೀಪ್, ಜಂಟಿ ಆಯುಕ್ತರು(ಘನತ್ಯಾಜ್ಯ) ಶ್ರೀ ಸರ್ಪರಾಜ್ ಖಾನ್ ಹಾಗೂ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಕಸ ವಿಲೇವಾರಿ ಮಾಡುವುದು ಪಾಲಿಕೆಯ ಜವಾಬ್ದಾರಿ ಮಾತ್ರವಲ್ಲ. ಪಾಲಿಕೆಯ ಜೊತೆ ನಾಗರಿಕರು ಸಹಭಾಗಿತ್ವದೊಂದಿಗೆ ಒಟ್ಟಾಗಿ ಕೈಜೋಡಿಸಿ ಕಸದ ಸಮಸ್ಯೆ ನಿವಾರಣೆ ಮಾಡಿಕೊಳ್ಳಬೇಕು ಎಂದು ಶಾಸಕರು ರಿಜ್ವಾನ್ ಹರ್ಷದ್ ರವರು ತಿಳಿಸಿದರು.

ಸರ್ವರೂ ಜೊತೆಗೂಡಿ ಶಿವಾಜಿನಗರ ವಾರ್ಡ್ ವ್ಯಾಪ್ತಿಯಲ್ಲಿ ಕಸಮುಕ್ತ ಪ್ರದೇಶವಾಗಿಸುವ ನಿಟ್ಟಿನಲ್ಲಿ ಕೆಲಸ ಮಾಡಬೇಕು. ಪಾಲಿಕೆ ಜೊತೆ ನಾಗರಿಕರು ಪಣತೊಟ್ಟು ಕೆಲಸ ಮಾಡಿದಾಗ ಕಸದ ಸಮಸ್ಯೆ ನಿವಾರಣೆ ಮಾಡಲು ಸಾಧ್ಯವಾಗುತ್ತದೆ. ಕಸ ವಿಲೇವಾರಿ ಮಾಡುವ ಸಂಬಂಧ ಪಾಲಿಕೆಯು ಶಿವಾಜಿನಗರ ವಾರ್ಡ್ ನಲ್ಲಿ ಮೈಕ್ರೋಪ್ಲಾನ್ ಮಾಡಿದ್ದು, ವೈಜ್ಞಾನಿಕವಾಗಿ ಕಸ ವಿಲೇವಾರಿ ಮಾಡಲು ಕ್ರಮವಹಿಸಲಾಗುತ್ತಿದೆ. 750 ಮನೆಗೊಂದರಂತೆ ಬ್ಲಾಕ್ ರಚಿಸಲಾಗಿದ್ದು, ಈಗಾಗಲೇ 200 ಸ್ವಯಂಸೇವಕರು ಈ ಯೋಜನೆಗೆ ಕೈಜೋಡಿಸಿದ್ದಾರೆ ಎಂದರು.

ಪೂರ್ವ ವಲಯ ವ್ಯಾಪ್ತಿಯ ಶಿವಾಜಿನಗರ ವಾರ್ಡ್ ವ್ಯಾಪ್ತಿಯಲ್ಲಿ ರಸಲ್ ಮಾರುಕಟ್ಟೆ ಹಾಗೂ ಹೆಚ್ಚು ವಾಣಿಜ್ಯ ಪ್ರದೇಶಗಳಿದ್ದು ಅತಿ ಹೆಚ್ಚು ಕಸ ಉತ್ಪತ್ತಿ ಆಗುವ ಪ್ರದೇಶವಾಗಿದೆ. ಈ ಪೈಕಿ ಶಿವಾಜಿನಗರ ವಾರ್ಡ್ ನಿಂದಲೇ ಸಮರ್ಪಕ ಕಸ ವಿಲೇವಾರಿ ಮಾಡುವ ಪ್ರಕ್ರಿಯೆಗೆ ಚಾಲನೆ ನೀಡಲಾಗುತ್ತಿದೆ. ಇನ್ನು ಮುಂದೆ ಪ್ರತಿನಿತ್ಯ ಮನೆ-ಮನೆಗೆ ತೆರಳಿ ಕಸ ಸಂಗ್ರಹಿಸಲಾಗುತ್ತದೆ. ರಸ್ತೆ, ಪಾದಚಾರಿ ಮಾರ್ಗಗಳಲ್ಲಿ ಕಸ ಹಾಕಿದವರಿಗೆ ದಂಡ ವಿಧಿಸಲಾಗುತ್ತದೆ. ಶಿವಾಜಿನಗರ ವ್ಯಾಪ್ತಿಯಲ್ಲಿರುವ ಕಸ ಸುರಿಯುವ ಸ್ಥಳ(ಬ್ಲಾಕ್ ಸ್ಪಾಟ್)ಗಳನ್ನು ಗುರುತಿಸಿ ಸ್ವಚ್ಛಮಾಡಿ ಆ ಸ್ಥಳವನ್ನು ಸುಂದರೀಕರಣ ಮಾಡಲಾಗವುದು. ಕಸ ಸಂಗ್ರಹಿಸುವ ಆಟೋ ಟಿಪ್ಪರ್‌ಗಳಿಗೆ ಜಿಪಿಎಸ್ ಅಳವಡಿಸಲಾಗಿದ್ದು, ಯಾವ ಆಟೋ ಯಾವ ಸಮಯಕ್ಕೆ ತೆರಳಲಿದೆ, ಯಾವ ಮನೆ ಬಳಿ ಇದೆ ಎಂಬುದನ್ನು ನೋಡಬಹುದಾಗಿದೆ. ಆಟೋಗಳಲ್ಲಿ ಧ್ವನಿವರ್ಧಕಗಳ ಮೂಲಕ ಸ್ಥಳೀಯ ನಾಗರಿಕರಿಗೆ ಅರಿವು ಮೂಡಿಸುವ ಕೆಲಸ ಮಾಡಲಾಗುತ್ತದೆ. ಕಸಮುಕ್ತ ಶಿವಾಜಿನಗರ ಮಾಡಲು ಇಚ್ಛಿಸುವವರು ProjectShivajinagar.org ಗೆ ಭೇಟಿ ನೀಡಿ ಸ್ವಯಂಸೇವಕರಾಗಬಹುದು ಅಥವಾ 8884414425 ವ್ಯಾಟ್ಸಾಪ್ ಮೂಲಕ ಸಂದೇಶ ಕಳುಹಿಸಿ ಅಗತ್ಯ ಮಾಹಿತಿ ಪಡೆಯಬಹುದಾಗಿದೆ ಎಂದು ಹೇಳಿದರು.

ಘನತ್ಯಾಜ್ಯ ವಿಭಾಗದ ವಿಶೇಷ ಆಯುಕ್ತರು ರಂದೀಪ್  ಮಾತನಾಡಿ, ಪಾಲಿಕೆ ವ್ಯಾಪ್ತಿಯಲ್ಲಿ ಕಸದ ಸಮಸ್ಯೆ ನಿವಾರಣೆ ಮಾಡಲು ವಿನೂತನ ಯೋಜನೆ ಜಾರಿಗೊಳಿಸಲಾಗುತ್ತಿದೆ. ಈ ಸಂಬಂಧ ಶಿವಾಜಿನಗರದಲ್ಲಿ ಕಸದ ಸಮಸ್ಯೆ ನಿವಾರಣೆ ಮಾಡಲು ಯೋಜನೆ ರೂಪಿಸಲಾಗಿದ್ದು, ಮನೆ-ಮನೆಯಿಂದ ಕಸ ಸಂಗ್ರಹ ಮಾಡಲಾಗುತ್ತದೆ. ಜೊತೆಗೆ ಸ್ಟ್ರೀಟ್ ಸ್ವೀಪಿಂಗ್ ಕೂಡಾ ಮಾಡಲಾಗುತ್ತದೆ. ಪಾಲಿಕೆಯ ಜೊತೆ  ಜನಪ್ರತಿನಿಧಿಗಳು, ಸಾರ್ವಜನಿಕರು ಸಹಕಾರ ನೀಡಿದರೆ ತ್ವರಿತವಾಗಿ ಕಸದ ಸಮಸ್ಯೆ ನಿವಾರಣೆ ಮಾಡಬಹುದಾಗಿದೆ ಎಂದು ತಿಳಿಸಿದರು.

ಇನ್ನುಮುಂದೆ ಆಟೋ ಟಿಪ್ಪರ್ ಚಾಲಕರು/ಸಹಾಯಕರು ಕಸ ಸಂಗ್ರಹ ಮಾಡಲು ಸರಿಯಾದ ಸಮಯಕ್ಕೆ ಮನೆಗೆ ಹೋಗಬೇಕು, ಸ್ಥಳೀಯರಿಗೆ ಹಸಿ, ಒಣ ಹಾಗೂ ಸ್ಯಾನಿಟರಿ ತ್ಯಾಜ್ಯ ಬೇರ್ಪಡಿಸಿ ಕೊಡುವ ಬಗ್ಗೆ, ಯಾವ ದಿನ ಒಣ ಕಸ ಸಂಗ್ರಹಿಸಲಾಗುತ್ತದೆ ಎಂಬ ನಿಖರ  ಮಾಹಿತಿ ನೀಡಿಬೇಕು. ಕಸ ಸಂಗ್ರಹಿಸಲು ಬಾರದಿದ್ದಲ್ಲಿ ಯಾರಿಗೆ ದೂರು ನೀಡಬೇಕು ಎಂಬುದರ ಬಗ್ಗೆ ಮಾಹಿತಿ ನೀಡಲಾಗುತ್ತದೆ ಎಂದರು.